**ಸಿವಿಲ್ ಮತ್ತು ಜೆಎಮ್ಎಫ್ ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.**

**ಸಿ.ಸಿ ನಂಃ 1113 / 2017**

| | | |
|---|---|---|
| ಸಾಕ್ಷಿಯ ಹೆಸರಃ | ಬಸವರಾಜ | ಪ್ರಾ.ಸಾಃ 01 |
| ತಂದೆ/ಗಂಡನ ಹೆಸರುಃ | ಗುಂಡಪ್ಪ | ಚಾಸಾಃ 03 |
| ವಯಸ್ಸುಃ | 42 ವರ್ಷ | ದಿಃ 20.07.2019 |
| ಉದ್ಯೋಗಃ | ಅಬಕಾರಿ ಉಪ ನಿರೀಕ್ಷಕ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ಶಹಾಪುರ | |

**ಮುಖ್ಯ ವಿಚಾರಣೆಃ** ಮಾನ್ಯ ಹಿ.ಸ.ಸ.ಅ.ರಿಂದಃ

ನಾನು ದಿಃ 26.06.2015 ರಿಂದ ಇಲ್ಲಿಯವರೆಗೆ ಶಹಪೂರ ಉಪ ವಿಭಾಗದಲ್ಲಿ ಅಬಕಾರಿ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 25.03.2017 ರಂದು ನಾನು ಕಚೇರಿಯಲ್ಲಿದ್ದು ಚಾಸಾ-4 ರವರಿಗೆ ಪಂಚರನ್ನು ಕರೆದುಕೊಂಡು ಬರಲು ಹೇಳಿರುತ್ತೇನೆ. ತೆಲಂಗಾಣಾ ಸರಹದ್ದಿನ ಹತ್ತಿರ ಮದ್ಯ ಮತ್ತು ಸೇಂದಿ ಕಳ್ಳ ಸಾಗಾಣಿಕೆ ಆಗುತ್ತಿರುವ ಮಾಹಿತಿ ಇತ್ತು. ಚಾಸಾ-1 ಮತ್ತು 2 ರವರನ್ನು ಠಾಣೆಗೆ ಕರೆಸಿ ಅವರಿಗೆ ದಾಳಿ ಬಗ್ಗೆ ಮಾಹಿತಿ ತಿಳಿಸಿ ಅವರನ್ನು ಕರೆದುಕೊಂಡು ಶಹಾಪುರದಿಂದ 11-00 ಗಂಟೆಗೆ ಹೊರಟು ಚಾಸಾ-4, 6 ಮತ್ತು 7 ರವರೊಂದಿಗೆ ಗುಂಜನೂರು ಕ್ರಾಸ್ ಬಳಿ ಬಂದಿರುತ್ತೇವೆ. ಬರುವ ಹೋಗವ ವಾಹನಗಳನ್ನು ತಪಾಸಣೆ ಮಾಡಲು ಪ್ರಾರಂಭಿಸಿರುತ್ತೇವೆ. ಮದ್ಯಾಹ್ನ 2-00 ಗಂಟೆಗೆ ನಮಗೆ ಒಂದು ಪೋನ್ ಕರೆ ಬಂದಿರುತ್ತದೆ. ನಂದೇಪಲ್ಲಿ ಗ್ರಾಮದಲ್ಲಿ ಒಬ್ಬ ವ್ಯಕ್ತಿ ಅಕ್ರಮ ಸೇಂದಿ ಮಾರಾಟ ಮಾಡುತ್ತಿದ್ದಾನೆ ಎಂದು ಮಾಹಿತಿ ತಿಳಿದಿರುತ್ತದೆ. ನಂತರ ಪಂಚರು ಮತ್ತು ಸಿಬ್ಬಂದಿಯವರೊಂದಿಗೆ ನಂದೇಪಲ್ಲಿ ಗ್ರಾಮಕ್ಕೆ 2-30 ಗಂಟೆಗೆ ಹೋಗಿ ಹುಡುಕಾಡಿದಾಗ ಅನುಮಾನಾಸ್ಪದವಾಗಿ ಒಬ್ಬ ವ್ಯಕ್ತಿ ಬಸ್ ಸ್ಟಾಂಡ್ ಬಳಿ ಕುಳಿತಿದ್ದು ಕಂಡುಬಂದಿದ್ದು ಅನುಮಾನದಿಂದ ಅವನನ್ನು ಶೋಧನೆ ಮಾಡಲು ಸ್ಥಳದಲ್ಲಿ ಶೋಧನಾ ಪತ್ರ ತಯಾರಿಸಿ ಸಿಬ್ಬಂದಿ ಅವರನ್ನು ತಪಾಸಣೆ ಮಾಡಿದಾಗ ಅವರಬಳಿ 36 ಲೀಟರ ಸೇಂದಿ ಇರುವುದು ಕಂಡುಬಂದಿರುತ್ತದೆ. ನಂತರ ಅವನನ್ನು ವಿಚಾರಿಸಲಾಗಿ ತನ್ನ ಉಪಜೀವನಕ್ಕಾಗಿ ಅಕ್ರಮವಾಗಿ ಸೇಂದಿ ಮಾರಟ ಮಾಡುತ್ತಿರುವುದಾಗಿ ತಿಳಿಸಿರುತ್ತಾನೆ. ಅವರ ಹೆಸರು ಕೇಳಲಾಗಿ ತನ್ನ ಹೆಸರು ಸಿದ್ಯಾ ತಂದ ಗಂಟ್ಯಾ ರಾಘವ ಎಂದು ತಿಳಿಸಿರುತ್ತಾನೆ. ಸ್ಥಳದಲ್ಲಿ ರಸಾಯನಿಕ ಪರೀಕ್ಷೆಗಾಗಿ ಒಂದೊಂದು ಲೀಟರಿನ ಪ್ಲಾಸ್ಟಿಕ ಬಾಟಲಿಯಲ್ಲಿ ಸೇಂದಿಯನ್ನು ಮಾದರಿ ತೆಗೆದು ಸೀಲ್ ಮಾಡಿ

ಪಂಚರ ಸಹಿವುಳ್ಳ ಚೀಟಿಯನ್ನು ಅಂಟಿಸಿ ಮದ್ಯಾಹ್ನ 3-00 ರಿಂದ 4-00 ಗಂಟೆ ವರೆಗೆ ಪಂಚನಾಮೆಯನ್ನು ಮಾಡಿರುತ್ತೇವೆ. ಮುಂದಿನ ತನಿಖೆಗಾಗಿ ಆರೋಪಿ ಮತ್ತು ಮುದ್ದೆ ಮಾಲು ಕಚೇರಿಗೆ ತೆಗೆದುಕೊಂಡು ಬಂದು ಸರ್ಕಾರಿ ತರ್ಫೆ ಫಿರ್ಯಾದಿ ಸಲ್ಲಿಸಿ ಪ್ರ.ವ. ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿರುತ್ತೇನೆ.

ದಿಃ 13.06.2017 ರಂದು ರಸಾಯನಿಕ ಪರೀಕ್ಷೆಗಾಗಿ 3 ಮಾದರಿ ಬಾಟಲಿಗಳಲ್ಲಿ 2 ಮಾದರಿ ಬಾಟಲಿಗಳನ್ನು ಚಾಸಾ-4 ರವರ ಮುಖಾಂತರ ಕಳಿಸಿರುತ್ತೇನೆ. ರಸಾಯನಿಕ ಪರೀಕ್ಷೆ ವರದಿಯನ್ನು ದಿಃ 03.07.2017 ರಂದು ಸ್ವೀಕರಿಸಿರುತ್ತೇನೆ. ಸದರಿ ವರದಿಯ ಪ್ರಕಾರ ಸೇಂದಿ ಮಾನವ ಸೇವನೆಗೆ ಯೋಗ್ಯ ಇಲ್ಲ ಎಂದು ಕಂಡುಬಂದಿರುತ್ತದೆ. ಸಂಪೂರ್ಣ ತನಿಖೆ ಪೂರೈಸಿ ಆಪಾದಿತನ ವಿರುದ್ಧ ಆರೋಪ ಸಾಬೀತಾದ ಹಿನ್ನೆಲೆಯಲ್ಲಿ ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

ಜಪ್ತಿ ಪಂಚನಾಮೆಯನ್ನು ನಿಪಿ-1 ಎಂದು, ಸಾಕ್ಷಿ ಸಹಿಯನ್ನು ನಿಪಿ-1 ಎ ಎಂದು, ಪ್ರ.ವ. ವರದಿಯನ್ನು ನಿಪಿ-2 ಎಂದು, ಸಾಕ್ಷಿ ಸಹಿಯನ್ನು ನಿಪಿ-2 ಎ ಎಂದು, ಮಾದರಿ ಮುದ್ರೆಯನ್ನು ನಿಪಿ-3 ಎಂದು, ಸಾಕ್ಷಿ ಸಹಿಯನ್ನು ನಿಪಿ-3 ಎ ಎಂದು, ಶೋದಾಜ್ಞೆಯನ್ನು ನಿಪಿ-4 ಎಂದು, ಸಾಕ್ಷಿ ಸಹಿಯನ್ನು ನಿಪಿ-4 ಎ ಎಂದು, ರಸಾಯನಿಕ ಪರೀಕ್ಷೆಗೆ ಕಳಿಸಿದ ಪತ್ರವನ್ನು ನಿಪಿ-5 ಎಂದು, ಸಾಕ್ಷಿ ಸಹಿಯನ್ನು ನಿಪಿ-5 ಎ ಎಂದು, ಎಫ್.ಎಸ್.ಎಲ್. ವರದಿಯನ್ನು ನಿಪಿ-6 ಎಂದು, ಸಾಕ್ಷಿ ಸಹಿಯನ್ನು ನಿಪಿ-6 ಎ ಎಂದು, ಸರ್ಕಾರಿ ತರ್ಫೆ ಫಿರ್ಯಾದಿಯನ್ನು ನಿಪಿ-7 ಎಂದು ಸಾಕ್ಷಿ ಸಹಿಯನ್ನು ನಿಪಿ-7 ಎ ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಮಾದರಿ ಬಾಟಲಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಎಂ.ಓ.-1 ಮತ್ತು 2 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಎನ್.ಬಿ.ಎಸ್. ವಕೀಲರಿಂದಃ**

ನಂದೇಪಲ್ಲಿ ಗ್ರಾಮದಲ್ಲಿ ಅಕ್ರಮ ಸೇಂದಿ ಮಾರಾಟ ಆಗುವ ಬಗ್ಗೆ ಮಾಹಿತಿ ಬಂದ ನಂತರ ಯಾದಗಿರಿ ಅಧಿಕಾರಿಗಳ ಸಹಾಯ ಪಡೆದಿರುವುದಿಲ್ಲ. ಗುಂಜನೂರು ಕ್ರಾಸ್ ಬಳಿ ಬಂದಾಗ ಮದ್ಯಾಹ್ನ 1-55 ಅಗಿತ್ತು. ನಾವು ನಂದೇಪಲ್ಲಿ ಗ್ರಾಮಕ್ಕೆ ಹೋದಾಗ ಬಸ್ ನಿಲ್ದಾಣದ

ಹತ್ತಿರ ಸುಮಾರು ಜನ ಇದ್ದರು. ಸುಮಾರು 150 ಅಡಿ ದೂರದಿಂದ ನೋಡಿರುತ್ತೇವೆ. ಒಬ್ಬ ವ್ಯಕ್ತಿ ಗಂಟು ತೆಗೆದುಕೊಂಡು ಕುಳಿತಿದ್ದು ಅನುಮಾನ ಬಂದು ಅವರನ್ನು ಹಿಡಿದಿರುತ್ತೇವೆ. ನಾವು ನೋಡಿದಾಗ ಅಲ್ಲಿ ಯಾವುದೇ ಗಿರಾಕಿಗಳು ಇರಲಿಲ್ಲ. ಸೇಂದಿ ಮಾರಾಟ ಮಾಡುವುದಕ್ಕೆ ಸಂಬಂಧಿಸಿದಂತೆ ಆರೋಪಿ ಬಳಿ ಗ್ಲಾಸ್‌ಗಳು ಸಿಕ್ಕಿರುವುದಿಲ್ಲ. ಚಾಸಾ-7 ರವರು ಆರೋಪಿಯನ್ನು ಹಿಡಿದಿರುತ್ತಾರೆ. ಸುತ್ತ ಮುತ್ತ ಇರುವ ಜನರನ್ನು ಆರೋಪಿ ಸೇಂದಿ ಮಾರಾಟ ಮಾಡುವ ಬಗ್ಗೆ ವಿಚಾರಣೆ ಮಾಡಿರುತ್ತೇವೆ ಸಾಕ್ಷಿ ಮುಂದುವರೆದು ಅವರು ಯಾವುದಕ್ಕೂ ಸಹಕಾರ ನೀಡಿರುವುದಿಲ್ಲ ಎಂದು ಹೇಳುವರು. ಆರೋಪಿ ಬಳಿ ಯಾವುದೇ ಹಣ ಇರಲಿಲ್ಲ. ಆರೋಪಿಯನ್ನು ನಾನೇ ಸ್ವತಃ ಶೋಧನೆ ಮಾಡಿರುತ್ತೇನೆ. ಅಂಗ ಶೋಧನೆಗೆ ಪ್ರತ್ಯೇಕವಾದ ಪಂಚನಾಮೆ ಮಾಡಿರುವುದಿಲ್ಲ. ಶೋಧನಾ ಪತ್ರ ಮಾತ್ರ ತಯಾರಿಸಿರುತ್ತೇವೆ. ನಂದೇಪಲ್ಲಿ ಗ್ರಾಮದಿಂದ ತೆಲಂಗಾಣ ಸರಹದ್ದು 8-9 ಕಿ.ಮೀ. ದೂರ ಇರುತ್ತದೆ.

ಆರೋಪಿ ಬಳಿ ಇದ್ದ ಪ್ಲಾಸ್ಟಿಕ ಚೀಲ ಬಿಳಿ ಬಣ್ಣದ್ದಾಗಿತ್ತು. ಪಂಚನಾಮೆಯಲ್ಲಿ ಅದನ್ನು ನಮೂದಿಸಿಲ್ಲ ಎಂದರೆ ನೆನಪಿಲ್ಲ. ಸೇಂದಿಯನ್ನು ಆರೋಪಿ ಕುಂಟಿ ಮರಿ ಚೆಕ್ ಪೋಸ್ಟ ಬಳಿ ಇರುವ ಸೇಂದಿ ಮಾರಾಟ ಕೇಂದ್ರದಿಂದ ತಂದಿರುವುದಾಗಿ ತಿಳಿಸಿರುತ್ತಾನೆ.

ನನಗೆ ಗುಂಜನೂರು ಕ್ರಾಸ್ ಬಳಿ ಇರುವಾಗ ಮಾಹಿತಿ ಬಂದಿದ್ದು, ಪಂಚರು ಮತ್ತು ಸಿಬ್ಬಂದಿಯೊಂದಿಗೆ ಇಲಾಖಾ ಜೀಪಿನಲ್ಲಿ ನಂದೇಪಲ್ಲಿ ಬಸ್ ನಿಲ್ದಾಣ ಹತ್ತಿರ ಹೋಗಿದ್ದು ಅಲ್ಲಿ ಒಬ್ಬ ವ್ಯಕ್ತಿ ಅನುಮಾನಾಸ್ಪದವಾಗಿ ಗಂಟನ್ನು ಇಟ್ಟುಕೊಂಡು ಕುಳಿತಿದ್ದು ನಂತರ ನಾವು ಅನುಮಾನ ಬಂದು ಶೋಧನಾ ಪತ್ರ ತಯಾರಿಸಿ ಆರೋಪಿಯನ್ನು ಹಿಡಿದು ಶೋದನೆ ಮಾಡಿದ್ದು, 36 ಲೀಟರ ಸೇಂದಿಯನ್ನು ಜಪ್ತಿ ಪಡಿಸಿಕೊಂಡಿದ್ದು, ರಸಾಯನಿಕ ಪರೀಕ್ಷೆಗಾಗಿ ಮಾದರಿ ತೆಗೆದಿದ್ದು, ಸ್ಥಳದಲ್ಲಿ ಪಂಚರ ಸಮಕ್ಷಮ ಪಂಚನಾಮೆ ಮಾಡಿದ್ದು ಸುಳ್ಳು ಎಂದರೆ ಸರಿಯಲ್ಲ.

ಈ ಪ್ರಕರಣದಲ್ಲಿ ಫಿರ್ಯಾದಿ ಮತ್ತು ತನಿಖಾಧಿಕಾರಿ ನಾನೇ ಆಗಿರುತ್ತೇನೆ ಎಂದರೆ ಸರಿ. ಇಲಾಖಾ ಅಂಕಿ ಸಂಖ್ಯೆಗೋಸ್ಕರ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳು ದೋಷಾರೋಪಣೆ ಪಟ್ಟಿ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಎಲ್ಲ್ಹೇರಿ ಗ್ರಾಮದವನಾಗಿದ್ದು ಒಬ್ಬ ರೈತನಾಗಿದ್ದು ಅವನು ಯಾವುದೇ ತಪ್ಪು ಮಾಡಿಲ್ಲ ಎಂದು ಗೊತ್ತಿದ್ದರೂ ಸಹ ಸುಳ್ಳು ಪ್ರಕರಣ ದಾಖಲಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಗೂ ಮುದ್ದೆ ಮಾಲಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆ :</u>** ಇಲ್ಲ

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ.